ದಿನಾಂಕ: 13.01.2023ರಂದು ಬೆಳಿಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ.143 [107] ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 16.01.2023ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಸುಬ್ರಮಣಿ. ಆರ್. ಮೌಲ್ಯ ಮಾಪಕರು
3. ಶ್ರೀ ಶಿವಕುಮಾರಯ್ಯ, ಹಿ.ಆ.ಪ
4. ಡಾ: ಅನಿಲ್‌ಕುಮಾರ್, ಆರೋಗ್ಯಾಧಿಕಾರಿ ನಮ್ಮ ಕ್ಲೀನಿಕ್
5. ಶ್ರೀ ದರ್ಶನ್, ಕೆ.ಆರ್. ಮಾರ್ಷಲ್
6. ಶ್ರೀ ರವಿ. ಸಿ. ಕಂದಾಯ ನಿರೀಕ್ಷಕರು
7. ಶ್ರೀ ಶಿವರಾಂ, ಅರಣ್ಯಾಧಿಕಾರಿ
8. ಶ್ರೀ ಮಹೇಶ್,
9. ಶ್ರೀ ಹನಿಕೇಶ್, ಆರೋಗ್ಯ ಪರಿವೀಕ್ಷಕರು
10. ಶ್ರೀ ವಿಜಯಕುಮಾರ್, ಸದಸ್ಯರು
11. ಶ್ರೀ ಮಂಜೇಗೌಡ

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 143ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಪ್ರಸ್ತುತ ಸಾಲಿನಲ್ಲಿ ವಾರ್ಡ್ ನಂ. 143 ವಾರ್ಡ್ ವ್ಯಾಪ್ತಿಯಲ್ಲಿ ಕರ ವಸೂಲಿ 85% ರಿಂದ 95% ರವರೆಗೆ ವಸೂಲಾಗಿದ್ದು, ಇನ್ನುಳಿದಂತಹ ಶೇ. ಕರವಸೂಲಿಯನ್ನು ಪ್ರಸ್ತುತ ಸಾಲಿನಲ್ಲಿಯೇ ಪೂರ್ಣ ಪ್ರಮಾಣದಲ್ಲಿ ಗುರಿ ತಲುಪಲು ಮುಂಜಾಕ್ರಮ ವಹಿಸುತ್ತೇವೆ ಎಂದು ಸಭೆಗೆ ಕಂದಾಯ ಅಧಿಕಾರಿಗಳು ತಿಳಿಸಿರುತ್ತಾರೆ.

2. ಪ್ರಸ್ತುತ ಸಾಲಿನ ವಾರ್ಡ್ ನಂ. 143/ಶಿವನಗರ ಪ್ರದೇಶ ವ್ಯಾಪ್ತಿಯಲ್ಲಿ ಸ್ವಚ್ಚತಾ ಕೆಲಸವು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದು, ಇನ್ನು ಮುಂದೆ ಈ ರೀತಿಯಲ್ಲಿ ಮುಂದುವರೆಸಿಕೊಂಡು ಹೋಗುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

3. ದಿನಾಂಕ: 03.12.2022ರಂದು ಅರಣ್ಯ ಅಧಿಕಾರಿಗಳು ಅನುಪಸ್ಥಿತಿಯಲ್ಲಿ ಸದಸ್ಯರು ಮತ್ತು ನಾಗರರು ಸಭೆಯಲ್ಲಿ ಆಯ್ದ ಭಾಗಗಳಲ್ಲಿ ಮರದ ಕೊಂಬೆಗಳು ಒಣಗಿದ್ದು, ಸಂಚರಿಸುವ ಸಾರ್ವಜನಿಕರಿಗೆ ಮತ್ತು ಸಂಚರಿಸುವ ವಾಹನಗಳ ಮೇಲೆ ಬೀಳುವ ಮುನ್ನೆಚ್ಚರಿಕೆಯಿಂದ ಕ್ರಮ ವಹಿಸುವಂತೆ ಸಂಬಂಧಿಸಿದ ಅರಣ್ಯ ಸಿಬ್ಬಂದಿಯವರಿ ಆದೇಶಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

4. ಮಹಾಗಣಪತಿನಗರದ 7ನೇ ಅಡ್ಡ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಒಳಚರಂಡಿ ನೀರು ಮಳೆ ನೀರು ಚರಂಡಿಯಲ್ಲಿ ಹರಿದು ದುರ್ವಾಸನೆ ಬರುತ್ತದೆ ಎಂದು ಶ್ರೀ ನಂಜೇಗೌಡ ಮತ್ತು ಇತರರು ದೂರು ನೀಡಿದ್ದು, ಸದರಿ ದೂರಿನನ್ವಯ ಸಂಬಂಧಿಸಿದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಗೆ ಮಾಹಿತಿ ನೀಡಿ ತುರ್ತಾಗಿ ದುರಸ್ಥಿಪಡಿಸುವಂತೆ ಸೂಚಿಸಲಾಯಿತು.

(Signature) 16/1/23
ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 143

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner